(ಸಾಕ್ಷಿಯನ್ನು ದಿನಾಂಕ: 25.01.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಬಿ.ಆರ್.ಆರ್., ವಾದಿಗಳ ಪರ ವಕೀಲರಿಂದಃ**

ನಾನು ವೃತ್ತಿಯಲ್ಲಿ ಈಗ ಪತ್ರ ಬರಹಗಾರನಾಗಿರುತ್ತೇನೆ. ನನ್ನ ತಂದೆ ಶಾನುಭೋಗರು ಆಗಿದ್ದರು. ನನ್ನ ತಂದೆ ಮಾರ್ಕೋನಹಳ್ಳಿ ಗ್ರಾಮದಲ್ಲಿ ಶಾನುಭೋಗರು ಆಗಿರಲಿಲ್ಲ. ಮಾರ್ಕೋನಹಳ್ಳಿ ಮಾಯಣ್ಣರವರ ಪರಿಚಯ ನನಗಿರುತ್ತದೆ. ಸದರಿಯವರ ಮಕ್ಕಳಾದ ತಿಮ್ಮಯ್ಯ, ಕಾಡೇಗೌಡ, ಶ್ರೀನಿವಾಸ ಹಾಗೂ ಎಂ.ಎಂ. ಮಾಯಣ್ಣರವರ ಪರಿಚಯ ನನಗೆ ಇರುವುದಿಲ್ಲ. ನನ್ನ ಪ್ರಮಾಣ ಪತ್ರ ತಯಾರಿಸಲು ಒಕ್ಕಣೆಯನ್ನು ನಾನೇ ನೀಡಿರುತ್ತೇನೆ. ನಾನು ಪ್ರಮಾಣ ಪತ್ರ ತಯಾರಿಸಲು ಒಕ್ಕಣೆ ನೀಡಿದಾಗ ಮಾರ್ಕೋನಹಳ್ಳಿ ಮಾಯಣ್ಣರವರು ಮಾತ್ರ ಪರಿಚಯವಿರುವ ಬಗ್ಗೆ ಹೇಳಿರುತ್ತೇನೆ.

ನನಗೆ 1990 ನೇ ಸಾಲಿನಿಂದ ಪತ್ರ ಬರವಣಿಗೆಯ ಬಗ್ಗೆ ತಿಳಿದಿರುತ್ತದೆ. ವಿಭಾಗ ಮಾಡಿಕೊಳ್ಳುವಾಗ ವಿಭಾಗದ ಸ್ವತ್ತುಗಳು ವಿಭಾಗ ಮಾಡಿಕೊಳ್ಳುವವರ ಅಥವಾ ಅವರ ಕುಟುಂಬದವರ ಮಾಲೀಕತ್ವದಲ್ಲಿರಬೇಕು ಎಂದರೆ ಸರಿ. ನಿ.ಡಿ.2 ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿ.ಡಿ.2 ದಾಖಲೆಯನ್ನು ಓದಿಯೇ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಸ್ವತಹ ಮುಂದುವರೆದು, ಆದರೆ ಈಗ ಸದರಿ ದಾಖಲೆಯಲ್ಲಿ ಏನು ಬರೆದಿತ್ತು ಎಂದು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆಯ ಮುಖಾಂತರ ನನಗೆ ಮಾರ್ಕೋನಹಳ್ಳಿ ಮಾಯಣ್ಣರವರ ಪರಿಚಯವಿರುತ್ತದೆ. ನಾನು ಮಾರ್ಕೋನಹಳ್ಳಿ ಮಾಯಣ್ಣರವರನ್ನು ನಿ.ಡಿ.2 ದಾಖಲೆ ನೋಂದಣಿಯಾದಾಗ ನೋಡಿದ್ದು ಅದರ ಪೂರ್ವದಲ್ಲಿ ನೋಡಿರುವುದಿಲ್ಲ. ನಿ.ಡಿ.2 ದಾಖಲೆ ನೋಂದಣಿ ಮಾಡುವ ಕಾಲಕ್ಕೆ ನನ್ನ ತಂದೆ ಮಾರ್ಕೋನಹಳ್ಳಿ

ಮಾಯಣ್ಣರವರನ್ನು ನನಗೆ ಪರಿಚಯ ಮಾಡಿಕೊಟ್ಟಿರುತ್ತಾರೆ. ನಿ.ಡಿ.2 ದಾಖಲೆ ನೋಂದಣಿ ಮಾಡುವ ಪೂರ್ವದಲ್ಲಿ ಮಾರ್ಕೋನಹಳ್ಳಿ ಮಾಯಣ್ಣ ಮತ್ತು ಅವರ ಮಕ್ಕಳು ನನ್ನನ್ನು ತಮ್ಮ ಕುಟುಂಬದ ಸ್ವತ್ತುಗಳ ವಿಭಾಗದ ಸಂಬಂಧ ಭೇಟಿ ಮಾಡಿದ್ದಾರೆಯೇ ಎಂದರೆ ನನ್ನ ತಂದೆಯನ್ನು ಭೇಟಿ ಮಾಡಿರುತ್ತಾರೆ ಎಂದು ನುಡಿಯುತ್ತೇನೆ. ಆ ಸಮಯದಲ್ಲಿ ಮಾಯಣ್ಣ ಹಾಗೂ ಅವರ ಮಕ್ಕಳ ನಡುವೆ ವಿಭಾಗ ಆಗಿತ್ತೇ ಎಂದರೆ ಆಗಿರಲಿಲ್ಲ ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಹ ಮುಂದುವರೆದು, ಒಬ್ಬ ಮಗನಿಗೆ ಈಗಾಗಲೇ ಭಾಗ ನೀಡಲಾಗಿದ್ದು ಸದರಿಯವರಿಗೆ ಮಾತ್ರ ಸ್ವತ್ತುಗಳಲ್ಲಿ ಯಾವುದೇ ಭಾಗಾಂಶ ಇರುವುದಿಲ್ಲ ಎಂದು ಮಾರ್ಕೋನಹಳ್ಳಿ ಮಾಯಣ್ಣ ನನ್ನ ತಂದೆಗೆ ಹೇಳಿದ್ದರು ಎಂದು ನುಡಿಯುತ್ತಾರೆ.

ನಿ.ಡಿ.2 ದಾಖಲೆಯಲ್ಲಿ ವಿವರಿಸಿರುವ ವಿಭಾಗದ ಸ್ವತ್ತುಗಳು ಯಾರಿಗೆ ಸೇರಿರುತ್ತದೆ ಹಾಗೂ ಯಾರ ಸ್ವಾಧೀನದಲ್ಲಿರುತ್ತದೆ ಎಂದು ನಿಮಗೆ ವಿವರಿಸಲಾಗಿತ್ತೇ ಎಂದರೆ ನನಗೆ ಹೇಳಿರುವುದಿಲ್ಲ, ಬಿಕ್ಲಮ್ ರವರಿಗೆ ತಿಳಿಸಲಾಗಿತ್ತು ಎಂದು ನುಡಿಯುತ್ತೇನೆ. ಕುಟುಂಬಕ್ಕೆ ಸೇರದ ಸ್ವತ್ತುಗಳನ್ನು ಕುಟುಂಬದವರು ವಿಭಾಗ ಪತ್ರದಲ್ಲಿ ಸೇರಿಸಿ ವಿಭಾಗ ಮಾಡಲು ಪ್ರಯತ್ನಿಸಿದಾಗ ಅಂತಹ ವಿಭಾಗದ ವ್ಯವಹಾರಗಳಲ್ಲಿ ನಾನು ಎಂದೂ ಶಾಮೀಲಾಗಿರುವುದಿಲ್ಲ.

ಮಾರ್ಕೋನಹಳ್ಳಿ ಗ್ರಾಮದ ಸರ್ವೆ ನಂಬರ್ 61 ರಲ್ಲಿನ 2 ಎಕರೆ 20 ಗುಂಟೆ ಜಮೀನಿಗೆ ಸಂಬಂಧಿಸಿ ಕ್ರಯದ ಕರಾರು ಆಗಿದ್ದು, ಸದರಿ ಸ್ವತ್ತನ್ನು ವಿಭಾಗ ಮಾಡಿಕೊಳ್ಳುತ್ತಿರುವುದಾಗಿ ನನಗೆ ತಿಳಿಸಿದ್ದರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಗಳಿಗೆ ಸೇರಿದ ಸ್ವತ್ತನ್ನು ಲಪಟಾಯಿಸುವ ದುರುದ್ದೇಶದಿಂದ ನಿ.ಡಿ.2 ದಾಖಲೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನನಗೆ ಪತ್ರ ಬರಹದ ಬಗ್ಗೆ

ಅನುಭವವಿದ್ದ ಕಾರಣ ನನ್ನನ್ನು ನಿ.ಡಿ.2 ದಾಖಲೆಗೆ ಸಾಕ್ಷಿದಾರನಾಗಿ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಿ.2 ದಾಖಲೆಗೆ ಸಾಕ್ಷಿಯಾಗಿ ಸಹಿ ಮಾಡಿದ್ದನ್ನು ಹೊರತುಪಡಿಸಿ ಪ್ರತಿವಾದಿಯರ ಇತರೆ ಯಾವುದೇ ವ್ಯವಹಾರದಲ್ಲಿ ನಾನು ಭಾಗಿಯಾಗಿರುವುದಿಲ್ಲ ಎಂದರೆ ಸರಿ. ಸತ್ಯವನ್ನು ಮರೆಮಾಚಿ, ನಿಜವಾದ ಮಾಲೀಕತ್ವವನ್ನು ಮರೆಮಾಚಿ, ನಿಜವಾದ ಮಾಲೀಕರು ಹಾಗೂ ಅನುಭವದಾರರ ಅನುಪಸ್ಥಿತಿಯಲ್ಲಿ ನಿ.ಡಿ.2 ದಾಖಲೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

***ಸಹಿ/-***
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.